## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಬೈಲಹೊಂಗಲ

**ಸಿ.ಸಿ ನಂಃ 1202/2025**

**ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಬೈಲಹೊಂಗಲ ಪೋಲಿಸ್ ಠಾಣೆ,**

**-ವಿರುದ್ಧ-**

**ಆರೋಪಿಃ ಪ್ರಕಾಶ ವೀರನಗೌಡ ಪರ್ವತಗೌಡ್ರ**
ವಯಸ್ಸುಃ 40 ವರ್ಷ, ಉದ್ಯೋಗಃ ಬಸ್ಸ ಚಾಲಕ
ಸಾಃ ಚಿವಟಗುಂಡಿ ತಾಃ ಬೈಲಹೊಂಗಲ.

**ಆಪಾದನೆ**

**ಶ್ರೀಮತಿ. ರೋಹಿಣಿ ಡಿ ಬಸಾಪುರ,** ಪ್ರ.ದ.ನ್ಯಾ.ದಂಡಾಧಿಕಾರಿಗಳು, ಬೈಲಹೊಂಗಲ ಆದ ನಾನು ನಿಮ್ಮ ಮೇಲೆ ಮಾಡುವ ಆಪಾದನೆ ಇಂತಿದೆಃ

ದಿಃ 27.03.2025 ರಂದು 09.30 ಗಂಟೆಯ ಸಮಯದಲ್ಲಿ ಬೈಲಹೊಂಗಲ ಪೋಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ, ಸಂಗೊಳ್ಳಿ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ಸಂಗೊಳ್ಳಿ ಗುಡದೂರ ರಸ್ತೆಯ ಬಾಜು ಆರೋಪಿಯಾದ ನೀವು ನಡೆಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸ ನಂ. ಕೆಎ-23/ಎಫ್-0698 ನೇದ್ದನ್ನು ನಿಲ್ಲಿಸಿದ್ದು ಆಗ ಪಿರ್ಯಾದಿಯವರ ತಂದೆ ಚಾಸಾ ನಂ.7 ಬಸ್ಸ ಇಳಿಯುತ್ತಿರುವಾಗ ಆರೋಪಿಯು ತಾನು ನಡೆಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸವನ್ನು ಅತೀ ವೇಗವಾಗಿ, ನಿಷ್ಕಾಳಜಿತನದಿಂದ ಒಮ್ಮೆಲೇ ಬಸ್ಸವನ್ನು ಚಲಾಯಿಸಿ ಚಾಸಾ ನಂ.7 ಇವರಿಗೆ ಬಸ್ಸನಿಂದಾ ಕೆಳಗೆ ಕೆಡವಿ ಅಪಘಾತ ಮಾಡುವ ಮೂಲಕ ಕಲಂ. 281 ರ ಬಿ.ಎನ್.ಎಸ್. 2023 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅತೀವೇಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಚಾಸಾ ನಂ.7 ಇವರಿಗೆ ಬಸ್ಸನಿಂದ ಕೆಳಗೆ

ಕಡೆಡವಿ ಅಪಘಾತ ಪಡಿಸಿ ಅವರ ಎಡಗಡೆ ಚಪ್ಪಿಗೆ ಭಾರಿ ಗಾಯಪಡಿಸಿ, ಆ ಮೂಲಕ ಕಲಂ. 125(ಬಿ) ಬಿ.ಎನ್.ಎಸ್. 2023 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ, ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

**1)** ಈಗ ನಾನು ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿದೆಯೇ?
ಉತ್ತರ ಆ ಃ

**2)** ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ಇಲ್ಲವೋ ?
ಉತ್ತರ ಆಃ

(ಆರೋಪಿತರಿಗೆ ಅಪಾದನೆಯ ಸಾರಾಂಶವನ್ನು ಅವರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಕೇಳಿ ಅವರ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸಹಿ/-

ದಿನಾಂಕಃ 05.11.2025 ಪ್ರ.ದ.ನ್ಯಾ.ದಂಡಾಧಿಕಾರಿಗಳು, ಬೈಲಹೊಂಗಲ